ಮಧ್ಯಂತರ ಅರ್ಜಿ ಆದೇಶದ ಮೇರೆಗೆ

**ದಿನಾಂಕ 25-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.**

**<u>ಪಾಟೀ ಸವಾಲು:-</u> ಆರೋಪಿತರ** ಪರ ಶ್ರೀ SMR ವಕೀಲರಿಂದ.

ನನಗೆ ಓದಲು ಬರೆಯಲು ಬರುವುದಿಲ್ಲ. ದೂರನ್ನು ನೀಡಿದ ದಿನಾಂಕ, ತಿಂಗಳು ಹೇಳಲು ಬರುವುದಿಲ್ಲ. ದೂರನ್ನು ಸಂಜೆ 07.30 ಗಂಟೆಗೆ ನೀಡಿರುತ್ತೇನೆ. ರಾತ್ರಿ ಇಡಿ ಠಾಣೆಯಲ್ಲಿ ಇದ್ದೇವು. ನಮ್ಮ ವಿರುದ್ದ ರಾಯಚೂರು ನ್ಯಾಯಾಲಯದಲ್ಲಿ ಎಸ್.ಸಿ 81/2022 ದಖಲಾಗಿದ್ದು ಈಗಲೂ ಚಾಲ್ತಿಯಲ್ಲಿ ಇದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು 5 ನೇ ಆರೋಪಿ ಆಗಿರುತ್ತೇನೆ. ಪೋಲಿಸರು ದೂರನ್ನು ಆಸ್ಪತ್ರೆಯಲ್ಲಿ ಬರೆದುಕೊಂಡು ಹೋಗಿರುತ್ತಾರೆ. ಪೋಲಿಸರು ಆಸ್ಪತ್ರೆಗೆ ಬಂದು ದೂರನ್ನು ಬರೆದುಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಹಿ ಪಡೆದಿರುತ್ತಾರೆ ಆದರೆ ಎಷ್ಟು ಸಹಿ ಪಡೆದಿರುತ್ತಾರೆ ನೆನಪಿಲ್ಲ. ಆಸ್ಪತ್ರೆಯಲ್ಲಿ ಸಹಿ ಮಾಡಿದ್ದನ್ನು ಹೊರತು ಪಡಿಸಿ ಬೇರೆ ಕಡೆ ಸಹಿ ಮಾಡಿರುವುದಿಲ್ಲ. ದೂರು ನೀಡಿದ ಮರುದಿನ ಪೋಲಿಸರು ಗುನ್ನ ಸ್ಥಳಕ್ಕೆ ಪಂಚರ ಸಮಕ್ಷಮ ಬಂದಿದ್ದು ಆಗ ನಾನು ಇದ್ದೆ. ಪಂಚನಾಮೆಗೆ ಇಬ್ಬರು ಪೋಲಿಸರು ಬಂದಿದ್ದರು ಮತ್ತೆ ಅವರೊಂದಿಗೆ ಯಾರು ಬಂದಿದ್ದರು ನೆನಪಿಲ್ಲ. ಪೋಲಿಸರು ಆಸ್ಪತ್ರೆಯಲ್ಲಿ ದೂರನ್ನು ಬರೆದುಕೊಂಡ ನಂತರ ನನಗೆ ಓದಿ ಹೇಳಿಲ್ಲ. ಘಟನ ಸ್ಥಳದ ಪೂರ್ವಕ್ಕೆ ಮಲ್ಲಿಕಾರ್ಜುನ ಮನೆ, ಪಶ್ಚಿಮಕ್ಕೆ ಶಿವಪ್ಪ ಮನೆ, ಉತ್ತರಕ್ಕೆ ದಾಸರ ಮನೆ ಮತ್ತು ದಕ್ಷಿಣಕ್ಕೆ ದೊಡ್ಡಿ ಖಾಲಿ ಜಾಗ ಇರುತ್ತದೆ. ಘಟನೆ ಸಮಯದಲ್ಲಿ ಸಾಕಷ್ಟು ಜನ ಸೇರಿದ್ದರು ಅವರ ಹೆಸರು ಹೇಳಲು ಬರುವುದಿಲ್ಲ. ಸದರಿ ಜಗಳ ಪ್ಯಾಟೀ ಬಸವೇಶ್ವರ ಗುಡಿ ಇರುತ್ತದೆ. ಸದರಿ ಗುಡಿ ಸುತ್ತಮುತ್ತ ಮನೆಗಳು ಇರುತ್ತವೆ. ನಮ್ಮ, ದಾಸರ ಇತರರ ಮನೆಗಳು ಇರುತ್ತವೆ ಪ್ರತಿಯೊಬ್ಬರ ಮನೆಯವರ ಹೆಸರು ಹೇಳಲು ಬರುವುದಿಲ್ಲ. 1 ಮತ್ತು 2 ನೇ ಆರೋಪಿತರು ನನಗೆ ಕಟ್ಟಿಗೆಯಿಂದ ಹೊಡೆದಿದ್ದು ಉಳಿದರು ಕೂಡಿ ನನಗೆ ಕೈಯಿಂದ ದೇಹದ ತುಂಬೆಲ್ಲ ಹೊಡೆದಿರುತ್ತಾರೆ. ಯಾವ ಆರೋಪಿ ದೇಹದ ಯಾವ ಭಾಗಕ್ಕೆ ಎಷ್ಟು ಏಟಗಳನ್ನು ಹೊಡೆದಿರುತ್ತಾನೆ ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಒಂದು ಕಟ್ಟಿಗೆ ಇತ್ತು. ನಮಗೆ ಹೊಡೆದಿರುವ ಕಟ್ಟಿಗೆಯ ಜಾತಿ ಹೇಳಲು ಬರುವುದಿಲ್ಲ. ಸದರಿ ಕಟ್ಟಿಗೆಗೆ ಕೊಕ್ಕೆಗಳು ಇದ್ದವೇ - ಎಂಬ ಪ್ರಶ್ನೆಗೆ ಸಾಕ್ಷಿ ಆರೋಪಿತರು ಹೊಡೆಯುತ್ತಿರುವಾಗ ಕಟ್ಟಿಗೆಗೆ ಕೊಕ್ಕೆಗಳು ಇದ್ದ ಬಗ್ಗೆ

ನೋಡಿರುವುದಿಲ್ಲ. ಕಾಲಿಗೆ ತೀವ್ರ ಸ್ವರೂಪದ ಗಾಯವಾಗಿದ್ದು ದೇಹದ ಇತರ ಭಾಗಕ್ಕೆ ಮುಖಾ ಪೆಟುಟಗಳು ಆಗಿರುತ್ತವೆ. ನನ್ನ ಕಾಲಿಗೆ ಆದ ಗಾಯದಿಂದ ಬಟ್ಟೆಗೆ ರಕ್ತ ಆಗಿತ್ತು. ಸದರಿ ರಕ್ತದ ಕಲೆ ಇರುವ ಬಟ್ಟೆಯನ್ನು ಪೋಲಿಸರು ತೆಗೆದುಕೊಂಡಿರುವುದಿಲ್ಲ. ಸದರಿ ಬಟ್ಟೆ ಬಿಳಿ ಬಣ್ಣದ ಬಟ್ಟೆ ಆಗಿತ್ತು. ಮುಮಾ-1 ಎಲ್ಲ ಕಡೆ ಸಿಗುತ್ತವೆ ಎಂದರೆ ಸರಿ. ಘಟನೆ ನಡೆದಾಗ ಕತ್ತಲು ಆಗಿತ್ತು. ಕತ್ತಲ್ಲ ಇದುದ್ದಂದ ಮುಖ ಕಳುವುದಿಲ್ಲ ಎಂದರೆ ಸರಿ. ಆರೋಪಿತರು ನಮ್ಮ ವಿರುದ್ಧ ಪ್ರಕರಣ ದಾಖಲು ಮಾಡಿದ್ದರಿಂದರಿಂದ ಅದಕ್ಕೆ ಪ್ರತಿಯಾಗಿ ಈ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇ ಎಂದರೆ ಸರಿ. ಪಂಚನಾಮೆ ಕಾಲಕ್ಕೆ ಪೋಲಿಸರು ಯಾವುದೇ ವಸ್ತು ತೆಗೆದುಕೊಂಡಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.

**<u>ಮಧ್ಯಂತರ ಅರ್ಜಿ ಆದೇಶದ ಮೇರೆಗೆ</u>**

**ದಿನಾಂಕ 25-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.**

<u>ಪಾಟೀ ಸವಾಲು</u>**:-** ಆರೋಪಿತರ ಪರ ಶ್ರೀ SMR ವಕೀಲರಿಂದ.

ಪೋಲಿಸರು ನನ್ನನ್ನು ದೂರು ದಾಖಲು ಮಾಡುವ ಸಮಯದಲ್ಲಿ ಠಾಣೆಯಲ್ಲಿ ವಿಚಾರಣೆ ಮಾಡುತ್ತಾರೆ. ಪೋಲಿಸರು ನನ್ನ ಹೇಳಿಕೆ ಪಡೆದಿಲ್ಲ. ಘಟನ ಸವಯದಲ್ಲಿ ನಾನು, ಶರಣಪ್ಪ, ಭೀಮಪ್ಪಮತ್ತು ನಾಗರಾಜ ಮಾತ್ರ ಇದ್ದೆವು. ಘಟನೆ ಸಂಜೆ 07.30 ಗಂಟೆಗೆ ಆಗಿತ್ತು ಆತ ಕತ್ತಲು ಇತ್ತು. ಘಟನ ಸ್ಥಳ ಸುತ್ತಮುತ್ತ ಸಾಕಷ್ಟು ಮನೆಗಳು ಇರುತ್ತವೆ. ಅ ಸಮಯದಲ್ಲಿ ಸಾಕಷ್ಟು ಜನರು ಸೇರಿದ್ದರು ಅವರ ಹೆಸರು ಹೇಳಲು ಬರುವುದಿಲ್ಲ. ಮುಮಾ-1 ಜಾಲಿ ಕಟ್ಟಿಗೆ ಆಗಿರುತ್ತದೆ ಅದರ ಉದ್ದ ಹೇಳಲು ಬರುವುದಿಲ್ಲ. ಸದರಿ ಕಟ್ಟಿಗೆಯಂತಹ ಕಟ್ಟಿಗೆ ಸಾಮಾನ್ಯವಾಗಿ ಎಲ್ಲ ಕಡೆ ಸಿಗುತ್ತವೆ. ದೂರನ್ನು ಚಾಸಾ-1 ರವರು ನೀಡಿರುತ್ತಾರೆ. ನಾವು ದೂರು ನೀಡಲು ಅಂದಾಜು 08.30 ಗಟೆಗೆ ಹೋಗಿರುತ್ತೇವೆ. ಠಾಣೆಯಲ್ಲಿ ಅಂದಾಜು 2 ತಾಸು ಇದ್ದೆವು. ಠಾಣೆಯಿಂದ ಚಾಸಾ-1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಆಸ್ಪತ್ರೆಗೆ ಹೋದಾಗ ಸಮಯ ಎಷ್ಟು ಇತ್ತು ಎಂದು ಹೇಳಲು ಬರುವುದಿಲ್ಲ. ಠಾಣೆಯಿಂದ ನಾನು ಮನೆಗೆ ಬಂದಿದ್ದು ನಮ್ಮ ತಂದೆಯನ್ನು ಆಸ್ಪತ್ರೆಗೆ 5-6 ಜನ ಕರೆದುಕೊಂಡು ಹೋಗಿರುತ್ತಾರೆ. ಮರುದಿನ ಆಸ್ಪತ್ರೆಯಿಂದ ಚಾಸಾ-1 ಬಿಡುಗಡೆ ಆಗಿರುತ್ತಾರೆ. ಬಿಡಿಗಡೆಯದ ನಿಖರವಾದ ಸಮಯ ಹೇಳಲು ಬರುವುದಿಲ್ಲ. ಚಸಾ-1 ಆಸ್ಪತ್ರೆಯಿಂದ ಮನೆಗೆ ಬಂದ ನಂ ಪುನಃ ಎಲ್ಲಿ ಹೋಗಿರುವುದಲ್ಲ. ಠಾಣೆಯಲ್ಲಿ ನನ್ನ ತಂದೆ ಪೋಲಿಸರಿಗೆ ಹೇವಿಕೆ ದೂರನ್ನು ನೀಡಿರುತ್ತಾರೆ. ಆರೋಪಿತರ ಮತ್ತು ನಮ್ಮ ನಡುಬೆ ಇರುತ. ಆರೋಪಿತರು ನಮ್ಮ ಮೇಲೆ ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದು ರಾಯಚೂರು ನ್ಯಾಯಾಲಯದಲ್ಲಿ ನಡೆಯುತ್ತಿದೆ ಎಂದರೆ ಸರಿ. ಆರೋಪಿತರು ನಮ್ಮ ವಿರುದ್ಧ ಪ್ರಕರಣ ದಾಖಲು ಮಾಡಿದ್ದರಿಂದ ಅದಕ್ಕೆ ಪ್ರತಿಯಾಗಿ ಈ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ದ್ವಿಚಕ್ರ ವಾಹನದ ನಂ, ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ, ದೇವದುರ್ಗ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**

**ನ್ಯಾಯಾಲಯ, ದೇವದುರ್ಗ.**

**CC No.416/2023**

**CW -2 PW-7**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಭೀಮಪ್ಪ |
| ತಂದೆ | ಃ | ನಾಗಪ್ಪ |
| ವಯಸ್ಸು | ಃ | 70 |
| ಉದ್ಯೋಗ | ಃ | ಕೂಲಿ |
| ವಾಸಸ್ಥಳ | ಃ | ಗಬ್ಬೂರು |
| ಪ್ರಮಾಣಿಕರಿಸಿದ ದಿನಾಂಕ | ಃ | **25-04-2026** |

---

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ**

ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಯಾವುದೇ ವಸ್ತುಗಳನ್ನು ಜಪ್ತಿ ಮಾಡಿಕೊಂಡಿಲ್ಲ. ನಾನು ಹೆಬ್ಬಟ್ಟಿನ ಗುರುತು ಹಾಕುತ್ತೇನೆ. ಪಂಚನಾಮೆಯಲ್ಲಿ ಬರೆದ ಸಂಗತಿಗಳು ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

**ಪಾಟೀ ಸವಾಲು:- ಮಾನ್ಯ ಸ.ಸ.ಅ ರವರಿಂದ**

ದಿನಾಂಕ 27-02-2021 ರಂದು ಬೆಳಿಗ್ಗೆ 10:30 ರಿಂದ 11:30 ಗಂಟೆ ವರೆಗೆ ಚಾಸಾ-1 ರವರ ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಪೋಲಿಸರು ಪಂಚನಾಮೆ ಮಾಡಿ ಒಂದು ಕಟ್ಟಿಗೆಯನ್ನು ಜಪ್ತಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು:- ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಮರುವಿಚಾರಣೆ:- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ, ದೇವದುರ್ಗ.